## ಮಾಹಿತಿಪೂರ್ಣ

‘ಜೀನ್ ಎಡಿಟಿಂಗ್’, ಎಸ್. ರವಿಪ್ರಕಾಶ್ ಅವರ ಮುಖಪುಟ ಲೇಖನ (ಸುಧಾ 2 ಆಗಸ್ಟ್) ಮಾಹಿತಿಯನ್ನು ಎಳೆ ಎಳೆಯಾಗಿ ಬಿಚ್ಚಿಟ್ಟಿದೆ. ವೈದ್ಯಕೀಯ ಕ್ಷೇತ್ರದ ಪ್ರಚಲಿತ ವಿದ್ಯಮಾನಗಳ ಅನಾವರಣವಾಗಿದೆ.

—ಎಂ.ಎಸ್. ಧರ್ಮೇಂದ್ರ ದೊಡ್ಡಮಗ್ಗೆ, ಕೆ.ಪಿ. ರಾಮಗುಂಡಿ ಬೈಲಹೊಂಗಲ, ಮಧುರ ಸುಬ್ರಹ್ಮಣ್ಯ ಬೆಂಗಳೂರು




## ವಿಸ್ಮಯ ಮೂಡಿತು

ಮುಖಪುಟ ಲೇಖನ ಓದುತ್ತಿದ್ದಂತೆ ನಮ್ಮ ತಂತ್ರಜ್ಞಾನ ಎತ್ತಸಾಗುತ್ತಿದೆ ಎಂಬ ವಿಸ್ಮಯ ಮೂಡಿತು. ಜೀವಿಗಳ ಹಣೆಬರಹವನ್ನೇ ತಿದ್ದುವ ಹೊಸ ಕ್ರಾಂತಿಗೆ ನಾಂದಿ ಹಾಡುವಂತಿದೆ. ವಂಶವಾಹಿ ತಿದ್ದುಪಡಿಯ ಮೂಲಕ ದುಪ್ಪಟ್ಟು ಸ್ನಾಯುಗಳು ಬೆಳೆಯುವಂತೆ ಮಾಡುವುದು, ವಿಜ್ಞಾನಿಗಳು ಮನುಷ್ಯನ ಮುಪ್ಪನ್ನು ಮುಂದೂಡುವ ಪ್ರಯತ್ನಕ್ಕೆ ಮುನ್ನುಡಿ ಬರೆಯುತ್ತಿದ್ದಾರೆ. ಮನುಷ್ಯನ ತದ್ರೂಪ ಸೃಷ್ಟಿಯ ಬಗ್ಗೆಯೂ ಚಿಂತನೆ ನಡೆಸಿದೆ.

— ವಿ. ಹೇಮಂತಕುಮಾರ ಬೆಂಗಳೂರು

## ಮನದುಂಬಿ ಬಂತು

‘ಮೌನದಳಲು’ (ಬಿ.ಆರ್. ಲಕ್ಷ್ಮಣರಾವ್) ಲೇಖನ ಚೆನ್ನಾಗಿದೆ. ಲೇಖಕರು ತಮ್ಮ ಆತ್ಮೀಯ ಗೆಳೆಯ ಇತ್ತೀಚೆಗೆ ನಿಧನರಾದ ಜನಪ್ರಿಯ ಸಾಹಿತಿ, ಎಂ.ಎನ್. ವ್ಯಾಸರಾವ್ ಅವರಿಗೆ ಸಲ್ಲಿಸಿರುವ ನಮನ ಓದಿ ಮನದುಂಬಿ ಬಂದಿತು.

—ಸುಂದರ್ ಬೆಂಗಳೂರು, ಪಿ.ಜಯವಂತ ಪೈ ಕುಂದಾಪುರ, ರುಕ್ಮಿಣಿ ಕೃ ದೇಶಪಾಂಡೆ ಗೋಕಾಕ, ಎಚ್.ಎಸ್.ರಾಘವೇಂದ್ರ ಬೆಂಗಳೂರು, ವೆಂಕಟೇಶ್ ಮುದಗಲ್ ಕಲಬುರಗಿ

## ಆರೋಗ್ಯ ಲೇಖನ

ಆರೋಗ್ಯ ಅಂಕಣದಲ್ಲಿ ‘ಮಹಿಳೆಯರನ್ನೇ ಬಾಧಿಸುವ ಸಂಧಿವಾತ’ (ಉಮಾ ಅನಂತ್) ಲೇಖನವನ್ನು ಪ್ರತಿ ಮಹಿಳೆಯರೂ ಓದಿ ತಿಳಿದುಕೊಳ್ಳುವಂತಹ ಮಾಹಿತಿಪೂರ್ಣ ಲೇಖನ. ಸಂಧಿವಾತ, ಕೀಲು ನೋವು ಮುಂತಾದ ಸಮಸ್ಯೆಗಳು ಹೆಚ್ಚಾಗಿ ಮಹಿಳೆಯರನ್ನೇ ಆಕ್ರಮಿಸುತ್ತಿವೆ. ಸಂಧಿವಾತದ ಲಕ್ಷಣಗಳು, ಇದರ ಚಿಕಿತ್ಸೆ ಏನು ಇವೆ ಮುಂತಾದ ಹಲವು ವಿಷಯ ತಿಳಿದಂತಾಯಿತು. ಇತ್ತೀಚಿನ ದಿನಗಳಲ್ಲಿ ಮಹಿಳೆಯರಲ್ಲದೆ ಮಕ್ಕಳು ಸಹ ಸಂಧಿವಾತ ಸೇರಿದಂತೆ ಇದಕ್ಕೆ ಸಂಬಂಧಿಸಿದ ಸಮಸ್ಯೆಗಳಿಂದ ಬಳಲುತ್ತಿದ್ದಾರೆಂದು ತಿಳಿದು ಮನಸ್ಸಿಗೆ ನೋವಾಯಿತು.

—ಪ್ರಾರ್ಥನಾ ಹೇಮಂತಕುಮಾರ ಬೆಂಗಳೂರು, ಸೋಮಣ್ಣ ಎಸ್.ಡಿ. ಚಿಕ್ಕಮಗಳೂರು

## ಕಥೆಗಾರರಿಗೆ ಹ್ಯಾಟ್ಸಾಫ್!

ಅಪ್ಪ (ಸದಾಶಿವ ಸೊರಟೂರು) ಕಥೆ ಮನ ಕಲಕಿತು. ಕುತೂಹಲಭರಿತವಾದ ಈ ಕಥೆಯಲ್ಲಿ ತಂದೆಯನ್ನು ಹುಡುಕ ಹೊರಟು ಮಗು ಕೊನೆಗೆ ತಾಯಿಯನ್ನೂ ಕಳೆದುಕೊಂಡಿದ್ದು ದುಃಖ ತರಿಸಿತು. ಕಣ್ಣಾಲಿಗಳು ತೇವಗೊಂಡು ವ್ಯಾಕುಲತೆ ಮನಸ್ಸನ್ನು ಆವರಿಸಿತು. ಕಥೆಗಾರರಿಗೆ ಹ್ಯಾಟ್ಸಾಫ್!

—ಬಿ. ಚಂದ್ರೇಗೌಡ ಬೆಂಗಳೂರು, ಮೀನಾಕ್ಷಿ ಕೆ.ರಾಮಗುಂಡಿ ಬೈಲಹೊಂಗಲ, ಕೊಹಿಮ ಬಸರಕೋಡು, ಸ್ಮಿತಾ ಮೈಸೂರು

## ವಾಸ್ತವದ ಪ್ರತಿರೂಪ

‘ಅಪ್ಪ’ ಕಥೆಯು ನನ್ನ ಅಂತಃಕರಣವನ್ನೇ ಕಲಕಿ ಬಿಟ್ಟಿದೆ. ಇದು ಕಾಲ್ಪನಿಕ ಕಥೆಯಲ್ಲ. ನಮ್ಮ ಸಮಾಜದಲ್ಲಿ ನಡೆಯುತ್ತಿರುವ ವಾಸ್ತವ ಸಂಗತಿಯ ಪ್ರತಿರೂಪ ಕಥೆಯ ಅಂತ್ಯದಲ್ಲಿ ಕಥಾನಾಯಕರು ಗಳಗಳನೆ ಅಳುವುದನ್ನು ಬಿಟ್ಟರೆ ಬೇರೇನೂ ಮಾಡಲಾರದಂತಹ ಪರಿಸ್ಥಿತಿ ಅವರದ್ದು.

—ಬಿ.ಎಸ್. ಹೇಮಾಜಿರಾವ್ ತುಮಕೂರು

## ಐರ್ಲೆಂಡಿನ ಐಸಿರಿ

ಪ್ರವಾಸ ಲೇಖನ (ಸಿ.ಸಿದ್ದರಾಜು ಆಲಕೆರೆ) ಪ್ರಕೃತಿ ಸೌಂದರ್ಯದಿಂದ ತುಂಬಿ ತುಳುಕುತ್ತಿರುವ ‘ದ್ವೀಪ ದೇಶ’ ಐರ್ಲೆಂಡಿನ ಪರಿಚಯ ಅರ್ಥಪೂರ್ಣ. ಸಂಬಂಧಿಸಿದ ಚಿತ್ರಗಳೂ ಸೊಗಸಾಗಿವೆ.

—ಎಸ್. ಚನ್ನಪ್ಪ ಮೈಸೂರು, ರವೀಂದ್ರನಾಥ ಶಿ.ಯಡಹಳ್ಳಿ ಬೀಳಗಿ

## ಪುಟ್ಟ ದೇಶ ಅದ್ಭುತ ಸಾಧನೆ

‘ಪುಟ್ಟ ದೇಶ, ದೊಡ್ಡ ಕನಸು’ (ಆನಂದ ತೀರ್ಥ ಪ್ಯಾಟಿ) ಲೇಖನ ಮುದ ನೀಡಿತು. ಇಲ್ಲಿಯವರೆಗೆ ಕ್ರೊವೇಷ್ಯಾದ ಕುರಿತು ತಿಳಿದಿರಲಿಲ್ಲ. ಈವರೆಗೆ ನಡೆದ ಒಲಿಂಪಿಕ್‌ಗಳಲ್ಲಿ ಕ್ರೊವೇಷ್ಯಾ ಒಟ್ಟು 44 ಪದಕ ಪಡೆದಿದೆ ಎಂಬುದು ಅದ್ಭುತ ಸಾಧನೆ.

—ರತ್ನಾಕರ ಹೆಗಡೆಕಟ್ಟೆ, ಮೂಡುಬಿದಿರೆ, ಕೋಟೇಶ್ವರ ಸೂರ್ಯನಾರಾಯಣ ರಾವ್ ಬೆಂಗಳೂರು, ರಾಜಶೇಖರ ಹಾದಿಮನಿ ಧಾರವಾಡ

## ವ್ಯಾಯಾಮ ಮನಸ್ಸಿಗೂ ಆರಾಮ

‘ಫಿಟ್‌ನೆಸ್’ ಅಂಕಣದಲ್ಲಿ ‘ಹಸಿರು ವ್ಯಾಯಾಮ; ಮನಸ್ಸಿಗೂ ಆರಾಮ’ (ನಿರೂಪಣೆ: ಸುಧಾ ಹೆಗಡೆ) ಲೇಖನ ಎಲ್ಲರಿಗೂ ಸರಳ, ಸುಲಭ ಆರೋಗ್ಯ ವಿಧಾನವನ್ನು ವಿವರಿಸಿದೆ. ವ್ಯಾಯಾಮ ಕಟ್ಟುನಿಟ್ಟಾಗಿ ಅನುಸರಿಸುವವರು ಡಾಕ್ಟರನ್ನೇ ದೂರವಿಡಬಹುದು.

—ಎಂ. ಮೃತ್ಯುಂಜಯಪ್ಪ ಚಿತ್ರದುರ್ಗ

## ಸೊಗಸಾಗಿದೆ

‘ಭೂರಮೆಗೆ ಶೃಂಗಾರ ಚಿಂಗಾರ’ (ಸಿ.ಎಸ್.ಸುರೇಶ್) ಚಿತ್ರ ಬರಹ ಸೊಗಸಾಗಿದೆ.

—ಕೆ.ವಿ.ರಾಜಲಕ್ಷ್ಮಿ ಬೆಂಗಳೂರು

## ಒಂದೇ ಲೇಖನ; ಎರಡು ಪತ್ರಿಕೆಗಳಲ್ಲಿ..

‘ತರಕಾರಿಯ ಗುಣಗಳನ್ನು ಬಲ್ಲಿರಾ?’(ಬಿ.ಹನುಮಂತ ಭಟ್) ಲೇಖನ ಈ ಮೊದಲು ಜುಲೈ 18 ರ ‘ಮಂಗಳ’ ವಾರಪತ್ರಿಕೆಯಲ್ಲಿ `ನಿಮಗೆ ತಿಳಿದಿರಲಿ ತರಕಾರಿ ಗುಣಗಳು’ ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಗಿದೆ.

—ಮುರಲೀಧರ ಕುಲಕರ್ಣಿ ಬೀದರ್

ಸಮಸ್ಯೆ ನಿಮ್ಮದು ಪರಿಹಾರ ನಮ್ಮದು
ದಕ್ಷಿಣ ಭಾರತದ ಜನರಲ್ಲಿ ಪ್ರಶಂಸೆಗಳಿಸಿರುವ ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಈಗಿನ ಕಾಲದಲ್ಲೂ ಜೀವಂತವಾಗಿರುವಂತಹ ಕೇರಳದ ಕೆಲವು ಪ್ರಾಚೀನ ವಿಸ್ಮಯ ವಿದ್ಯೆಗಳಿಂದ



ಶ್ರೀ ಸಾಯಿಬಾಬ ಉಪಾಸಕರು
ಕೇವಲ 5 ದಿನದಲ್ಲಿ
100% ಪರಿಹಾರ ಶತಸಿದ್ಧ
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
ಜೈಬಾಲಾಜಿ ಜ್ಯೋತಿಷ್ಯಂ ಬನಶಂಕರಿ ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ. ಬೆಂಗಳೂರು.9620444460